ದಿಃ **06-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಶ್ರೀ ಮಲ್ಲಿಕಾರ್ಜುನ ವಕೀಲರಿಂದಃ**

ದಾವ ಆಸ್ತಿಗಳ ಸರ್ವೇ ನಂಬರ ನನಗೆ ಹೇಳಲಾಗುವುದಿಲ್ಲ. 1ನೇ ಪ್ರತಿವಾದಿ ನನ್ನ ಅಣ್ಣ. ಪ್ರತಿವಾದಿ 3(ಬಿ) ನನ್ನ ಅಣ್ಣನ ಮಗನಾಗಿರುತ್ತಾರೆ. 1 ಮತ್ತು 3(ಬಿ) ಪ್ರತಿವಾದಿಯರು ನಮ್ಮ ಕುಟುಂಬದ ವ್ಯವಹಾರವನ್ನು ನೋಡಿಕೊಂಡು ಹೋಗುತ್ತಿದ್ದರು ಎಂದರೆ ನಿಜ. ದಾವ ಜಮೀನುಗಳು 1 ಮತ್ತು 3(ಬಿ) ಪ್ರತಿವಾದಿಯ ಹೆಸರಿನಲ್ಲಿ ಇವೆ ಎಂದರೆ ನಿಜ. 1 ಮತ್ತು 3(ಬಿ) ಪ್ರತಿವಾದಿಯರು ನಮ್ಮ ಕುಟುಂಬದ ಅಡಚಣೆ ಗೊಸ್ಕರ ದಾವ ಆಸ್ತಿಗಳನ್ನು 6ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ತನಗೆ ಪಾಲು ನೀಡಬಾರದು ಎಂಬ ಉದೇಶದಿಂದ ಆ ರೀತಿ ಮಾರಾಟ ಮಾಡಿದ್ದಾಗಿ ನುಡಿಯುತ್ತಾರೆ. ದಾವ ಆಸ್ತಿಗಳ ಕುರಿತು 6ನೇ ಪ್ರತಿವಾದಿ 2 ನೊಂದಾಯಿತ ಪತ್ರಗಳ ಮೂಲಕ ಖರಿದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ನಿಪಿ–5 ಖರೀದಿ ಪತ್ರಕ್ಕೆ ಪ್ರತಿವಾದಿಯರಾದ 3(ಎ), 3(ಸಿ), 3(ಡಿ), 3(ಡಿ), ಪ್ರತಿವಾದಿ 1(ಎ) ರವರು ಸಮ್ಮತಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–6 ಖೇರಿದಿ ಪತ್ರಕೆ ಪ್ರತಿವಾದಿ 1 ಹಾಗೂ ಪ್ರತಿವಾದಿಯರಾದ 3(ಎ), 3(ಬಿ), 3(ಸಿ), 3(ಇ), ಪ್ರತಿವಾದಿ 1(ಎ) ರವರು ಸಮ್ಮತಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 6ನೇ ಪ್ರತಿವಾದಿ ದಾವ ಆಸ್ತಿಗಳನ್ನು ಕೃಷಿಯೇತರ ಜಮಿನಾಗಿ ಮಾರ್ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತಿಲ್ಲ. 6ನೇ ಪ್ರತಿವಾದಿ 7ನೆ ಪ್ರತಿವಾದಿಯೂಂದಿಗೆ ಕರಾರು ಮಾಡಿಕೊಂಡಿದ್ದು ನನಗೆ ಗೊತ್ತಿಲ್ಲ. 8ನೇ ಪ್ರತಿವಾದಿ 6 ಮತ್ತು 7ನೇ ಪ್ರತಿವಾದಿಯಿಂದ ನಿವೇಶನಗಳನ್ನು ಖೇರಿದಿಸಿದ್ದು ನನಗೆ ಗೊತ್ತಿಲ್ಲ. 8ನೇ ಪ್ರತಿವಾದಿ ನಿವೇಶಗಳನು ಖರಿದಿಸುವ ಮುಂಚೆ ರಾಯಚೂರ ವಾಣಿ ದಿನಪತ್ರಿಕೆ ಪ್ರಕಟಣೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿವೇಶನಗಳನು ಖಃರಿದಿಸಿದ ದಿನದಂದೆ 6 ಮತ್ತು 7ನೇ ಪ್ರತಿವಾದಿಯರು ಅವುಗಳನ್ನು 8ನೇ ಪ್ರತಿವಾದಿಯ ಸ್ವಾದಿನಕ್ಕೆ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 8ನೇ ಪ್ರತಿವಾದಿ ತಾನು ಖರೀದಿಸಿದ 50 ನಿವಶೇನಗಳನು ನಗರಸಬೆ

ದಾಖಲೆಗಳಲ್ಲಿ ತಮ್ಮ ಹೆಸರಿಗೆ ನೊಂದಾಯಿಸಿಕೊಂಡಿರುತ್ತಾರೆ ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ಸದರಿ ನಿವೇಶನಗಳನ್ನು ತಮ್ಮ ಸದಸ್ಯರಿಗೆ ಹಂಚಿಕೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಆಸ್ತಿಗಳಲ್ಲಿ ಈಗ ಮನೆಗಳು ಆಗಿವೆ ಎಂದರೆ ಸಾಕ್ಷಿ ಅಲ್ಲಿ ಮನೆಗಳು ಇಲ್ಲ ಮತ್ತು ನಿವೇಶನಗಳು ಇಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿಯಲ್ಲಿ ಈಗ ಮನೆಗಳನ್ನು ನಿರ್ಮಿಸಿದ್ದು ಕೆಲವು ಪ್ಲಾಟುಗಳು ಇವೆ ಎಂದರೆ ಸರಿಯಲ್ಲ. ದಾವ ಆಸ್ತಿ ಸ್ವಾದಿನತೆ ನಮ್ಮ ಬಳಿ ಇಲ್ಲ ಎಂದರೆ ಸರಿಯಲ್ಲ.

3. ನಿಪಿ–17 ಪ್ರತಿವಾದಿ 3(ಎ) ರವರ ಕುಟುಂಬದ ವಂಶಾವಳಿ ಎಂದರೆ ಸರಿಯಲ್ಲ. ಸದರಿ ವಂಶಾವಳಿ ನಮ್ಮ ಕುಟುಂಬದ ವಂಶಾವಳಿ ಆಗಿರುತ್ತದೆ. ದಾವ ಆಸ್ತಿಯಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.